

# ಮರವರಳಿ ಪ್ರಾಣಿಗಳಾಗಿ...



ಪ್ರಾಣಿಗಳು ಭೂಮಿಯಲ್ಲಿ ಜನ್ಮತಾಳುತ್ತವೆ ಎಂಬುದು ನಿತ್ಯಸತ್ಯ. ಆದರೆ ಇಲ್ಲಿ ಕೆಲವೊಂದು ಪ್ರಾಣಿಗಳು ಮರದ ಬೊಡ್ಡೆಯಿಂದ ಜನ್ಮತಾಳಿವೆ. ಕಲಾವಿದನ ಕೈಚಳಕದಿಂದ ಈ ಪ್ರಾಣಿಗಳ ಪ್ರತಿರೂಪ ಗಮನಸೆಳೆಯುವಂತಿವೆ.

ಮರದ ಕಾಂಡದಲ್ಲಿ ಸುಂದರವಾದ ಕೆತ್ತನೆ ಮಾಡಿ ಮೃಗಗಳ ರೂಪ ಪಡೆದ ಈ ಕಲಾಕೃತಿಗಳನ್ನು ಮೊದಲು ಮಾಡಿದ್ದು 1950ರಲ್ಲಿ. ಕಲಾವಿದರಾದ ರೇ ಮರ್ಫಿ ಹಾಗೂ ಕೆನ್ ಕೈಸರ್ ಈ ಮರಚಿತ್ರದ ರೂವಾರಿಗಳು. ಅದಾಗಿ ರೇ ಮರ್ಫಿ 1952ರಲ್ಲಿ ಮರದ ತುಂಡಿನಲ್ಲಿ ತನ್ನ ಹೆಸರನ್ನು ಕೆತ್ತುವ ಮೂಲಕ ಈ ಕಲೆಗೆ ಸ್ಪಷ್ಟರೂಪ ನೀಡಿದ. ಅದೂ ತನ್ನ ತಂದೆಯ ನೆರವಿನಿಂದ. ಮತ್ತೊಬ್ಬ ಕಲಾವಿದ ಕೆನ್ ಕೈಸರ್ 1961ರಲ್ಲಿ ಒಟ್ಟು 50 ಪ್ರಾಣಿಗಳನ್ನು ಮರದ ಕೆತ್ತನೆಯಿಂದ ಸೃಷ್ಟಿಸಿ ದಾಖಲೆ ಮಾಡಿದ.

ಚೈನ್‌ಸಾ ಕಾರ್ವರ್ಸ್ ಎಂದು ಕರೆಯಲಾಗುವ ಈ ಕಲಾವಿದರು ಇಂದು ವಿಶ್ವದ ನಾನಾ ದೇಶಗಳಲ್ಲಿ ತಮ್ಮ ಕೈಚಳಕ ತೋರುತ್ತಿದ್ದಾರೆ. 1950ರಿಂದ ಈಚೆಗೆ ಈ ಕಲೆಯಲ್ಲೂ ಸಾಕಷ್ಟು ಮಾರ್ಪಾಡುಗಳು ನಡೆದಿವೆ. ಕೆನಡಾದ ಅನೇಕ ನಗರಗಳಲ್ಲಿರುವ ಉದ್ಯಾನಗಳಲ್ಲಿ ಈ ಮರಕೆತ್ತನೆಯ ಪ್ರಾಣಿಗಳು ಗಮನಸೆಳೆಯುತ್ತಿವೆ.

■ ಯು. ವೇಣೂರು

